ಈ ಹೊತ್ತಿನ ಕನ್ನಡ ಪುಸ್ತಕಗಳ ಮುಖಪುಟ ವಿನ್ಯಾಸಕ್ಕೆ ಹೊಸ ಬಣ್ಣಗಳನ್ನು ತಂದವರು ಸೌಮ್ಯ ಪ್ರಭು ಕಲ್ಯಾಣ್ಕರ್. ಉಡುಪಿಯ ಸೌಮ್ಯ, ಸದ್ಯಕ್ಕೆ ಬೆಂಗಳೂರು ನಿವಾಸಿ. ಗ್ರಾಫಿಕ್ ಹಾಗೂ ವೆಬ್ ಡಿಸೈನರ್ ಆಗಿಯೂ ಕೆಲಸ ಮಾಡಿರುವ ಅವರು ಕಥೆಗಾರ್ತಿಯೂ ಹೌದು. ಕೆಲವು ಕಾಲ ಪ್ರಕಟಗೊಂಡ, ಪುಸ್ತಕಲೋಕಕ್ಕೆ ಸಂಬಂಧಿಸಿದ 'ಋುಕ್ಕುಬುಕ್ಕು' ಜಾಲತಾಣದ ರೂವಾರಿ. 'ಜನ್ನನ ಪ್ರಪಂಚ' ಮೂಲಕ ಮಕ್ಕಳ ಕಥಾಲೋಕಕ್ಕೂ ಕಾಲಿಟ್ಟಿದ್ದಾರೆ.

ಮಲಗಿದ್ದ. ಹಿಂದಿನ ಬಾಗಿಲಿನಿಂದ ಅಡುಗೆ ಮನೆಗೆ ಬಂದವ 'ಕಮಲತ್ತೆ' ಎಂದು ಕರೆದ. ಒಲೆಯಲ್ಲಿ ಗಂಜಿ ಕೊತ ಕೊತ ಕುದಿಯುತಿತ್ತು. ಅದರ ಪರಿಮಳ ಅಲ್ಲೆಲ್ಲಾ ತುಂಬಿಕೊಂಡಿತ್ತು. ಒಲೆಯ ಬಳಿಯೇ ಮೈ ಚಾಚಿ ಮಲಗಿದ್ದ ಪೀಚೂ ಬೆಕ್ಕು. ಒಮ್ಮೆ ಇವನನ್ನು ತಲೆ ಎತ್ತಿ ನೋಡಿ 'ಗುರ್ರ್ ' ಎಂದು ಮತ್ತೆ ಮಲಗಿತು. ಬೇರೆ ಯಾರ ಸದ್ದೂ ಇರಲಿಲ್ಲ. ಅಲ್ಲಿಂದ ಅವರ ಹುಡುಕುತ್ತಾ, ಕೈಲಿರುವ ಹೂವನ್ನು ಗಿರಗಿಟ್ಲೆಯಂತೆ ತಿರುಗಿಸುತ್ತಾ, ಕೋಣೆಯಿಂದ ಕೋಣೆಗೆ ಸುತ್ತುತ್ತಾ ಕೊನೆಗೆ ಕಿಟ್ಟುಮಾಮನ ಕೋಣೆಗೆ ಬಂದ. ಆ ಕೋಣೆಗೆ ಬಂದರೆ ಜನ್ನುವಿಗೆ ಖುಷಿಯೋ ಖುಷಿ. ಮಾಮ ಯಾವಾಗ್ಲೂ ಚಿತ್ರದ ಪುಸ್ತಕಗಳನ್ನು ನೋಡಲು ಕೊಡುತ್ತಿದ್ದರು. ಅವರ ಕೋಣೆ ತುಂಬಾ ಪುಸ್ತಕಗಳೂ ಅಲ್ಲದೇ ಆಕರ್ಷಕ ವಸ್ತುಗಳು ಬೇರೆ. ಶಾಯಿ ಪೆನ್ನು, ಬಾಲ್ ಪೆನ್ನು, ಬಣ್ಣ ಬಣ್ಣದ ಬ್ರಷ್‌ಗಳು (ಎಲ್ಲಾ ಹೆಸರೂ ಮಾಮನೇ ಹೇಳಿಕೊಟ್ಟದ್ದು ಜನ್ನುವಿಗೆ) ಇನ್ನೂ ಏನೇನೋ. ನೋಡಿದಷ್ಟು ಮುಟ್ಟಿದಷ್ಟೂ ಸಾಕಾಗುತ್ತಿರಲಿಲ್ಲ. ಇವತ್ತು ಮಾಮ ಇರಲಿಲ್ಲವಾದ್ದರಿಂದ ಜನ್ನು ಏನೂ ಮುಟ್ಟದೆ ಅಲ್ಲೇ ಸುರುಳಿ ಸುತ್ತಿ ಗೋಡೆಗೆ ಒರಗಿಸಿಟ್ಟಿದ್ದ ಹಾಸಿಗೆ ಮೇಲೆ ಕುಳಿತು ಎಲ್ಲವನ್ನೂ ಕುತೂಹಲದಿಂದ ನೋಡಲಾರಂಭಿಸಿದ.

ಹಾಗೆಯೇ ಎಷ್ಟು ಹೊತ್ತು ನೋಡಿದನೋ ಏನೋ, ಅವನ ಗಮನ ಮೇಜಿನ ಮೇಲೆ ಹರಿಯಿತು. ಕೂತಲ್ಲಿಂದ ಎದ್ದು ತುದಿ ಕಾಲ ಮೇಲೆ ನಿಂತು ಮೇಜಿನ ಮೇಲೆ ಏನಿದೆಯೆಂದು ಇಣುಕಿದ. ಮೊದಲೇ ಕುಳ್ಳಪ್ಪ, ಅವನಿಗೆ ಅಷ್ಟೆತ್ತರದ ಮೇಜಿನ ಮೇಲಿದ್ದು ಕಂಡಿತೇ? ಕೈಲಿದ್ದ ಹೂವನ್ನು ಆ ಮೇಜಿನ ಮೇಲಿಟ್ಟು ಕಿಟಕಿಯ ಪಕ್ಕ ಇಟ್ಟಿದ್ದ ಕುರ್ಚಿಯನ್ನು ಎಳೆದು ತಂದು ಅದರ ಮೇಲೆ ಹತ್ತಿ ನಿಂತ. ಈಗ ಮೇಜಿನ ಮೇಲಿದ್ದ ಹಾಳೆ ಸಮೇತ ಅಲ್ಲಿದ್ದ ಎಲ್ಲಾ ವಸ್ತುಗಳೂ ಕಂಡವು. ಅದರ ಮೇಲೆ ಅವನು ಇಷ್ಟರವರೆಗೆ ನೋಡಿದ್ದಕ್ಕಿಂತ ಅಗಲದ ಬಿಳಿ ಹಾಳೆಯಿತ್ತು. ಉದ್ದನೆಯ ಕೂದಲ ಹುಡುಗಿಯ ಚೆಂದದ ಚಿತ್ರ, ಅದರ ಪಕ್ಕದಲ್ಲೇ ಕಿಟ್ಟುಮಾಮ ಕೈ ಬರಹವಿತ್ತು. ಹಾಳೆಯ ಪಕ್ಕದಲ್ಲಿ ಸುಮಾರು ಬಣ್ಣಗಳು, ಬ್ರಷ್‌ಗಳೂ ಇದ್ದವು. ಆ ಚಿತ್ರದಲ್ಲಿರುವ ಹುಡುಗಿ ಪೊರ್ಬುಗಳ ಮನೆಯ ಲವೀನಕ್ಕ ಥರನೇ ಕಂಡಳು. ಲವೀನಕ್ಕಗೂ ಉದ್ದ ಜಡೆ, ಈ ಚಿತ್ರದ ಹುಡುಗಿಯ ಥರಾನೇ...

ಜನ್ನು ಎಂಥ ದೊಡ್ಡ ಜನವಾ, ಮಾಮ ಬರೆದಿದ್ದು ಅರ್ಥವಾಗಲು? ಆದರೂ ಎಂಥ ಬರೆದದ್ದು ಅಂತ ಗೊತ್ತಾಗಬೇಕಿತ್ತು ಅವನಿಗೆ. ಯಾರನ್ನು ಕೇಳುವುದು ಅಂದುಕೊಂಡ. ಅಷ್ಟರಲ್ಲೇ ಕಿಟ್ಟು ಮಾಮನ ದನಿ ಕೇಳಿಸಿತು ಹೊರಗಿಂದ, ನಾನು ಕುರ್ಚಿ ಹತ್ತಿ ನೋಡಿದ್ದು ತಪ್ಪು ಅಂತ ತಿಳಿದ ಜನ್ನು ದಡಬಡಿಸಿ, ಮೇಜಿನ ಮೇಲಿಟ್ಟ ಮಿಠಾಯಿ ಹೂವ ಎತ್ತಿಕೊಂಡು ಕುರ್ಚಿಯಿಂದ ಕೆಳಗಿಳಿಯಲು ನೋಡಿದ. ಆಗಲೇ ಆಯ್ತು ನೋಡಿ ಅನಾಹುತ! ಅಲ್ಲೇ ಇಟ್ಟಿದ್ದ ಬ್ರಷ್ ಉರುಳಿ ಚಿತ್ರದ ಮೇಲೆ ಅದೂ ಸರಿಯಾಗಿ ಹುಡುಗಿಯ ಹಣೆಯ ಮೇಲೆ ಕೆಂಪು ಬಣ್ಣದ ಚುಕ್ಕಿಯ ಮೂಡಿಸಿತು. ಕುರ್ಚಿಯಿಂದ ಕೆಳಗಿಳಿಯಲೂ ಧೈರ್ಯ ಸಾಲದೇ ನಡುಗುತ್ತಾ ನಿಂತ. ಅಷ್ಟರಲ್ಲೇ ಬಾಗಿಲ ಬಳಿ ಬಂದಾಗಿತ್ತು ಕಿಟ್ಟು ಮಾಮ. ಅವರೋ ಈ ಮಾಣಿಯನ್ನು ಕಂಡು ನಗಲು ಹೊರಟವರು ಕುರ್ಚಿಯ ಮೇಲೆ ಅವನು ನಿಂತಿದ್ದು ನೋಡಿ, ಕೂಡಲೇ ಮೇಜಿನ ಕಡೆ ಧಾವಿಸಿ ಬಂದರು. ಚೆಲ್ಲಿದ್ದ ಬ್ರಷ್ ಅವರಿಗೆ ಕಥೆ ಹೇಳಿತು. 'ಯಾಕೆ ಜನ್ನು ನಿನಗೆ ಅಧಿಕ ಪ್ರಸಂಗ! ಹೋಗು ನೋಡ್ವಾ, ಒಂದ್ಸಲ ಇಲ್ಲಿಂದ' ಎಂದು ಬೇಸರ ಹಾಗೂ ಸಿಟ್ಟಿನ ದನಿಯಲ್ಲಿ ನುಡಿದರು. ಕಣ್ಣಲ್ಲಿ ನೀರು ತುಂಬಿಕೊಂಡ ಜನ್ನು ಮೆಲ್ಲನೆ ಕೆಳಗಿಳಿದು ಗೋಡೆಗೊರಗಿ ನಿಂತ ಕೈಲಿ ಹೂವಿಟ್ಟುಕೊಂಡು. ಎಷ್ಟು